# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002

**ಪತ್ರಿಕಾ ಪ್ರಕಟಣೆ** **ದಿನಾಂಕ:29.04.2020**

**ಮಳೆ ಅನಾಹುತ ಪ್ರದೇಶಗಳಿಗೆ ಭೇಟಿ:**



ನಗರದಲ್ಲಿ ಧಾರಾಕಾರ ಸುರಿದ ಮಳೆಯಿಂದಾಗಿ ಶಾಂತಲಾ ನಗರ ವಾರ್ಡ್-111 ವ್ಯಾಪ್ತಿಯ ಹೆಯ್ಸ್ ರಸ್ತೆ(Hayes Road)ಯಲ್ಲಿ ಸಂಭವಿಸಿರುವ ಅನಾಹುತ ಪ್ರದೇಶಕ್ಕೆ ಇಂದು ಪೂಜ್ಯ ಮಹಾಪೌರರು ರವರು ಭೇಟಿ ನೀಡಿದರು. ಈ ವೇಳೆ ಮಾನ್ಯ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ಸ್ಥಳೀಯ ಪಾಲಿಕೆ ಸದಸ್ಯರು ಶ್ರೀ ಎಂ.ಬಿ.ದ್ವಾರಕಾನಾಥ್(ದಾಲು), ಪೂರ್ವ ವಲಯ ಜಂಟಿ ಆಯುಕ್ತರು ಶ್ರೀಮತಿ ಪಲ್ಲವಿ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದಲ್ಲಿ ಧಾರಾಕಾರ ಸುರಿದ ಮಳೆಯಿಂದಾಗಿ ಪೂರ್ವ ವಲಯದ ಶಾಂತಲಾ ನಗರ ವಾರ್ಡ್-111 ವ್ಯಾಪ್ತಿಯ ಹೇಯ್ಸ್ ರಸ್ತೆ(Hayes Road)ಯಲ್ಲಿ ಕಟ್ಟಡ ನಿರ್ಮಾಣಕ್ಕೆ ತೆಗೆದಿದ್ದ ಗುಂಡಿ(ಬೇಸ್ಮೆಂಟ್)ಯಲ್ಲಿ ಮಳೆ ನೀರು ತುಂಬಿರುವ ಪರಿಣಾಮ ರಸ್ತೆ ಕುಸಿದಿರುವ ಸ್ಥಳಕ್ಕೆ ಭೇಟಿ ನೀಡಿ, ತಪಾಸಣೆ ನಡೆಸಿ ಕೂಡಲೆ ಸಮಸ್ಯೆ ಬಗೆಹರಿಸುವಂತೆ ಪೂಜ್ಯ ಮಹಾಪೌರರು ರವರು ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಮುಂಜಾನೆ ಜೋರು ಮಳೆ ಬಿದ್ದ ಪರಿಣಾಮ ಕಟ್ಟಡ ನಿರ್ಮಿಸಲು ತೆಗೆದಿದ್ದ ಗುಂಡಿಯಲ್ಲಿ ಮಳೆ ನೀರು ತುಂಬಿದ ಪರಿಣಾಮ ರಸ್ತೆ ಬದಿಯ ಮಣ್ಣು ಕುಸಿದು, ಎರಡು ಇಬಾಚಿ ಕೂಡ ಅದರಲ್ಲಿ ಬಿದ್ದಿದೆ. ಈ ಸಂಬಂಧ ಕೂಡಲೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಸ್ಥಳದ ಸುತ್ತಮುತ್ತಲಿನ ಮನೆಗಳಿಗೆ ನೋಟೀಸ್ ನೋಡಿ, ಮಳೆ ಎಚ್ಚಾದರೆ ಸ್ಥಳಿಯರನ್ನು ಬೇರೆಡೆ ಕಳುಯಿಸುವ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಟ್ಟಡ ನಿರ್ಮಾಣಕ್ಕಾಗಿ ರಸ್ತೆ ಬದಿಯವರೆಗೆ ಹಗೆದಿರುವ ಪರಿಣಾಮ ನೀರು ತುಂಬಿ ಕುಸಿದಿದೆ. ಈ ಸಂಬಂಧ ಕಟ್ಟಡ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಬೆಸ್ಕಾಂ ಹಾಗೂ ಜಲಮಂಡಳಿ ಅಧಿಕಾರಿಗಳ ಜೊತೆ ಚರ್ಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಇರುವ ಸಮಸ್ಯೆ ಬಗೆಹರಿಸಬೇಕು. ಸೈಟ್ ಸುತ್ತಲು ಬ್ಯಾರಿಕೇಡ್ ಹಾಕಿ, ರಾತ್ರಿ ವೇಳೆ ವಿದ್ಯುತ್ ದೀಪ ಅಳವಡಿಸಬೇಕು. ಸುತ್ತಮುತ್ತಲಿನ ಜನಕ್ಕೆ ಜಾಗೃತಿ ಮೂಡಿಸಲು ಸೂಚನೆ ನೀಡಿದರು.

**<u>ಕೋರಮಂಗಲ ವ್ಯಾಪ್ತಿಯ ನೀರು ನುಗ್ಗಿರುವ ಪ್ರದೇಶಗಳಿಗೆ ಭೇಟಿ:</u>**

ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂದು ಮುಂಜಾನೆ ಧಾರಾಕಾರ ಸುರಿದ ಮಳೆಯಿಂದ ಕೋರಮಂಗಲದ ಕೆಲವೆಡೆ ಪ್ರದೇಶಗಳು ಜಲಾವೃತವಾಗಿದ್ದು, ಇಂದು ಕೋರಮಂಲ 5 ಮತ್ತು 6ನೇ ಬ್ಲಾಕ್‌ಗೆ ಸಂಸದರಾದ ಶ್ರೀ ತೇಜಸ್ವಿ ಸೂರ್ಯ, ಶ್ರೀ ಪಿ.ಸಿ.ಮೋಹನ್, ಮಾಜಿ ಸಚಿವರು ಹಾಗೂ ಸ್ಥಳೀಯ ಶಾಸಕರು ಶ್ರೀ ರಾಮಲಿಂಗಾರೆಡ್ಡಿ, ಪೂಜ್ಯ ಮಹಾಪೌರರು, ಮಾನ್ಯ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ಸ್ಥಳೀಯ ಪಾಲಿಕೆ ಸದಸ್ಯರು ಶ್ರೀ ಚಂದ್ರಪ್ಪ ರೆಡ್ಡಿ, ಮಾನ್ಯ ಆಯುಕ್ತರು ಶ್ರೀ ಬಿ.ಹೆಚ್.ಅನಿಲ್ ಕುಮಾರ್, ಜಲಮಂಡಳಿ ಅಧ್ಯಕ್ಷರು ಶ್ರೀ ತುಷಾರ್ ಗಿರಿನಾಥ್, ರಾಜಕಾಲುವೆ ವಿಭಾಗದ ಮುಖ್ಯ ಅಭಿಯಂತರರು ಶ್ರೀ ಪ್ರಹ್ಲಾದ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ತಪಾಸಣೆ ಬಳಿಕ ಸಭೆ ನಡೆಸಿ, ಮಳೆಗಾಲದಲ್ಲಿ ಕೋರಮಂಗಲ, ಹೆಚ್.ಎಸ್.ಆರ್ ಲೇಔಟ್ ಪ್ರದೇಶಗಳಲ್ಲಿ ಮಳೆ ನೀರು ನಿಲ್ಲದಂತೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಹಾಗೂ ನಿಗದಿತ ಸಮಯದಲ್ಲಿ ಸಮಸ್ಯೆ ಬಗೆಹರಿಸುವ ಬಗ್ಗೆ ಚರ್ಚಿಸಲಾಯಿತು.

**<u>ಎಂಟು ಮರಗಳು ಧರೆಗೆ:</u>**

ನಗರದಲ್ಲಿ ಸುರಿದ ಮಳೆಯಿಂದ 8 ಮರಗಳು ಧರೆಗುರುಳಿದ್ದು, ಜೀವನ್ ಭೀಮಾ ನಗರದಲ್ಲಿ ಕಾರಿನ ಮೇಲೆ ಮರ ಬಿದ್ದು ಕಾರು ಜಖಂಗೊಂಡಿದೆ. ಅಲ್ಲದೆ ಪ್ಯಾಲೆಸ್ ರಸ್ತೆಯ ಮೇಖ್ರಿ ವೃತ್ತ, ಹೈಗ್ರೌಂಡ್, ಶ್ರೀರಾಮ ಮಂದಿರದ ಸಿ.ಟಿ. ಏರಿಯಾ(ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ), ಬಸವೇಶ್ವರ ನಗರದ ಎಸ್.ಬಿ.ಐ ಕಾಲೋನಿ, ವೈಯ್ಯಾಲಿ ಕಾವಲ್, ಬಾಗಲೂರು ಲೇಔಟ್, ಕೋರಮಂಗಲ 6ನೇ ಬ್ಲಾಕ್ ನಲ್ಲಿ ತಲಾ ಒಂದು ಮರ ಧರೆಗುರುಳಿವೆ. ಪಾಲಿಕೆ ಅರಣ್ಯ ವಿಭಾಗದ ತಂಡವು ಸ್ಥಳಕ್ಕೆ ತೆರಳಿ ಬಿದ್ದಿರುವ ಮರಗಳನ್ನು ತೆರವುಗೊಳಿಸಿರುತ್ತಾರೆ.

ಮುಂದುವರಿದು, ಹೆಚ್.ಎಸ್.ಆರ್ ಲೇಔಟ್ ಹಾಗೂ ಹೆಚ್.ಎಸ್.ಆರ್ ಸೆಕ್ಟರ್ 11 ಮತ್ತು 15ರ ರಸ್ತೆ ಮೇಲೆ ನಿಂತಿದ್ದ ನೀರನ್ನು ಹೈ ಪ್ರೆರ್ ಪಂಪ್ ಬಳಸಿ ಮಳೆ ನೀರನ್ನು ಹೊರ ಹಾಕಲಾಗಿದೆ. ಸ್ಥಳಕ್ಕೆ ವಲಯ ವಿಶೇಷ ಆಯುಕ್ತರು ಶ್ರೀ ಅನ್ಬುಕುಮಾರ್, ಜಂಟಿ ಆಯುಕ್ತರು ರಾಮಕೃಷ್ಣ ಹಾಗೂ ಇತರೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿದ್ದಾರೆ. ಅಲ್ಲದೆ, ಬೊಮ್ಮನಹಳ್ಳಿಯ ಬಿ.ಕೆ.ಎಲ್ ಕಾಲೋನಿ, ವಿಶ್ವ ಪ್ರಿಯ ಲೇಔಟ್‌ನ ಜಯಶ್ರೀ ಲೇಔಟ್, ಬಗಲಗುಂಟೆ, ಬನಶಂಕರಿ ಮೊದಲನೇ ಹಂತದ ಶ್ರೀನಿವಾಸನಗರ, ಕೋಣನಕುಂಟೆ ಕ್ರಾಸ್, ಮುರಗೇಶ್ ಪಾಳ್ಯ ಪ್ರದೇಶಗಳಲ್ಲಿ ನೀರು ನುಗ್ಗಿದ್ದು, ಪಂಪ್ ಗಳ ಮೂಲಕ ನೀರನ್ನು ಹೊರ ಹಾಕಲಾಗಿದೆ.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**